ಕ್ರೀಡಾಂಗಣಗಳ ಕಾಮಗಾರಿ

4091(1015); ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯ ಮಾಗಡಿ ಮತ್ತು ಬಿಡದಿ ಪಟ್ಟಣಗಳಲ್ಲಿ ಕ್ರೀಡಾಂಗಣಗಳ ಕಾಮಗಾರಿಗಳು ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಲು ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಿದೆ;

ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಇನ್ನೂ ಬೇಕಾಗಿರುವ ಹಣವೆಷ್ಟು;

ಇ) ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯ ಮಾಗಡಿ ಮತ್ತು ಬಿಡದಿ ಪಟ್ಟಣಗಳಲ್ಲಿ ಕ್ರೀಡಾಂಗಣಗಳ ಕಾಮಗಾರಿಗಳು ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮಾಗಡಿಯಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಮಾಡಲು ಇಲ್ಲಿಯವರೆಗೆ ₹ 28.00 ಲಕ್ಷಗಳನ್ನು ಬಿಡುಡೆ ಮಾಡಲಾಗಿದೆ.

ಬಿಡದಿಯಲ್ಲಿ ಮಿನಿ ಕ್ರೀಡಾಂಗಣವನ್ನು ನಿರ್ಮಿಸಲು ₹ 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮಾಗಡಿಯಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಮಾಡಲು ಇಲ್ಲಿಯವರೆಗೆ ₹ 28.00 ಲಕ್ಷಗಳನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆ.

ಬಿಡದಿಯಲ್ಲಿ ಮಿನಿ ಕ್ರೀಡಾಂಗಣವನ್ನು ನಿರ್ಮಿಸಲು ₹ 30.00 ಲಕ್ಷಗಳನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆ.

ಪ್ರಾಚ್ಯವಸ್ತು ಇಲಾಖೆಯು ಮಾಗಡಿ ಕೋಟೆಯ ಪುನಶ್ಚೇತನ ನಿರ್ಮಾಣ/ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿದ್ದು, ಕ್ರೀಡಾ ಅಂಕಣ ನಿರ್ಮಿಸುವ ಸ್ಥಳದಲ್ಲಿ ನಿರ್ಮಾಣ ಸಾಮಗ್ರಿ ಶೇಖರಿಸಿದ್ದು, ಈ ಕಾಮಗಾರಿ ಪೂರ್ಣಗೊಂಡ ನಂತರವಷ್ಟೆ ಕ್ರೀಡಾ ಅಂಕಣಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಬಿಡದಿ ಕ್ರೀಡಾಂಗಣದಲ್ಲಿ ಕಾಂಪೌಂಡು ಗೋಡೆ ನಿರ್ಮಿಸುವುದು ಹಾಗೂ ಚರಂಡಿಯ ಮೇಲ್ಭಾಗ ಆರ್‌ಸಿಸಿ ಸ್ಲಾಬ್ ಅಳವಡಿಸಲು ಒಟ್ಟು ₹ 25.00 ಲಕ್ಷಗಳ ಅವಶ್ಯಕತೆಯಿರುತ್ತದೆ.

ಇ) ಪ್ರಾಚ್ಯವಸ್ತು ಇಲಾಖೆಯು ಮಾಗಡಿ ಕೋಟೆಯ ಪುನಶ್ಚೇತನ ನಿರ್ಮಾಣ/ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿದ್ದು, ಕ್ರೀಡಾ ಅಂಕಣ ನಿರ್ಮಿಸುವ ಸ್ಥಳದಲ್ಲಿ ನಿರ್ಮಾಣ ಸಾಮಗ್ರಿ ಶೇಖರಿಸಿದ್ದು, ಈ ಕಾಮಗಾರಿ ಪೂರ್ಣಗೊಂಡ ನಂತರವಷ್ಟೆ ಕ್ರೀಡಾ ಅಂಕಣಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಬಿಡದಿಯಲ್ಲಿ ಅವಶ್ಯವಿರುವ ಚರಂಡಿ ಮತ್ತು ಕಾಂಪೌಂಡು ನಿರ್ಮಿಸುವ ಕಾಮಗಾರಿಯನ್ನು ಅನುದಾನ ಲಭ್ಯತೆ ಮೇರೆಗೆ ಕೈಗೊಳ್ಳಲಾಗುವುದು.

ಎರಡೂ ಕ್ರೀಡಾಂಗಣಗಳ ಕಾಮಗಾರಿಯನ್ನು ಕಾಮಗಾರಿ ಪ್ರಾರಂಭಿಸಿದ 90 ದಿನಗಳಲ್ಲಿ ಪೂರ್ಣಗೊಳಿಸಲಾಗುವುದು.